ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ನಾಯಿಗೂ, ಮನುಷ್ಯನಿಗೂ ಏನು ವ್ಯತ್ಯಾಸ?



ನಾಯಿಗಳಿಗೆ ವಿಟಮಿನ್ ಡಿ ಕೊರತೆ ಕಾಡುವುದಿಲ್ಲ.

ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ

ಇಡ್ಲಿ ಕೇಳಿದರೆ ಜೊತೆಗೆ ವಡೆಯೂ ಬಂದಿರುತ್ತದೆ?

ಇಡ್ಲಿಯಲ್ಲಿನ ಉದ್ದಿನ ವಾಯುವನ್ನು ವಡೆಯಲ್ಲಿನ ಮೆಣಸು ಒಡೆಯಲಂತೆ.

ಬಿ. ಚಂದ್ರೇಗೌಡ, ಬೆಂಗಳೂರು

ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ ಎಂದು ಹೇಳಿರುವುದೇಕೆ?

ಅವರೆಲ್ಲರೂ ನಮಗಿಂತ ಮೊದಲು ದೇವರಂತೆ ಫೋಟೊ ಸೇರುವವರೆಂದು.

ಅಮರಯ್ಯಾ ಪತ್ರಿಮಠ, ಸುರಪುರ

ನನ್ನ ಭವಿಷ್ಯದಲ್ಲಿ 'ಅನಿರೀಕ್ಷಿತ ಧನ ಪ್ರಾಪ್ತಿ' ಎಂದಿದೆಯಲ್ಲಾ?



'ಕೂಡಲೆ ಪಾಪರ್' ಎಂದೂ ಇರಬೇಕಲ್ಲ! ಆನ್‌ಲೈನ್‌ನಲ್ಲಿ ನೂರು ಕೊಟ್ಟು ಲಕ್ಷ ಹೊಡೆಯುವ ಸ್ಕ್ಯಾಮಿದೆ.

ಮುರಲೀಧರ ಕುಲಕರ್ಣಿ, ಬೀದರ್

ಅತಿರೇಕಕ್ಕೆ ಹೋಗುತ್ತಿರುವ ಸಿನಿಮಾ ತಾರೆಯರ ಮೇಲಿನ ಅಭಿಮಾನಕ್ಕೆ ಕಾನೂನಿನ ಕಡಿವಾಣ ಬೇಕಲ್ಲವೆ?

ಸಂಕೋಲೆ ಇದೆ; ತೊಡಿಸಬೇಕಾದ ಕೆಲವರು ತಾರೆಯರ ಕೋಲೆಬಸವರಾಗಿದ್ದಾರೆ.

ಮಹಾವೀರ ಕಾಸರ, ಶಿವಮೊಗ್ಗ

ಬರೆಯುವುದನ್ನು ಪ್ರಾರಂಭಿಸುವುದು ಹೇಗೆ?

ಓದುವುದನ್ನು ಹೆಚ್ಚಿಸಿಕೊಳ್ಳುವ ಮೂಲಕ.

ದಿನೇಶ್, ಗುಡ್ಡದೂರು

ಹೆಣ್ಣು ಹೊನ್ನು ಮಣ್ಣುಗಳ ಪೈಕಿ ಮಣ್ಣಿಗೇ ಜಾಸ್ತಿ ಬೆಲೆಯಂತೆ. ಹೌದಾ?

ಹಾಗೇನಿಲ್ಲ. ಹೆಣ್ಣು ಹೊನ್ನುಗಳ ಹಿಂದೆ ಬಿದ್ದವರ ಬಾಯಿಗೆ ಮಣ್ಣು ತಾನಾಗಿಯೇ ಬಿದ್ದದ್ದುಂಟು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ದುಡ್ಡು ಬಂದ ಮೇಲೆ ನೆಲಾನೇ ಕಾಣಲ್ಲ ಅಂತಾರೆ. ನಿಜಾನಾ?

ಕಾರ್ಪೆಟ್ ಹಾಸಿರುತ್ತಾರಲ್ಲ.

ರಾಜಶೇಖರ ಹಾದಿಮನಿ, ಧಾರವಾಡ

ಈಗಿನ ಹುಡುಗರು ಏಕೆ ಗಡ್ಡ ಬಿಡುತ್ತಾರೆ?

'ಯಾವ ರೀತಿಯಲ್ಲೂ ಬೋಳಿಸಿಕೊಳ್ಳಲು ಬಯಸುವುದಿಲ್ಲ' ಎಂದು ಸೂಚಿಸಲು.

ಕೆ.ಎಂ. ವಿಭೂತಿ, ಹರಿಹರ

ಮನುಷ್ಯನು ಮನುಜಕುಲದಲ್ಲಿ ಜನ್ಮತಾಳಿದರೂ ನರಿಬುದ್ಧಿ ಬರಲು ಕಾರಣವೇನು?

ನರ, ನರಿ ಇಂದ ಆರಂಭವಾಗಿ ಕಡೆಗೆ ನರಂ ಆಗುವ 'ರಾಗುಣಿತ' ಬದ್ಧತೆ.

ಎಂ.ಎ. ಕುಮಾರ್, ಬೆಂಗಳೂರು

ಹಿರಿಯರಿಗೆ ಬುದ್ಧಿ ಹೇಳುವವರು ಯಾರು?

'ಎನಗಿಂತ ಹಿರಿಯರಿಲ್ಲ' ಎಂಬ ಅಘೋಷಿತ ಟ್ಯಾಗ್‌ಲೈನ್ ಉಳ್ಳ ವಾಹಿನಿಗಳು!

ಬಿದರಹಳ್ಳಿ ಐಶ್ವರ್ಯ, ಹಿರೇಹಡಗಲಿ

ಅಹಂಕಾರಕ್ಕೂ, ಸಂಸ್ಕಾರಕ್ಕೂ ಇರುವ ವ್ಯತ್ಯಾಸವೇನು?

ಸಂಸ್ಕಾರ ಕ್ಷೀರ, ಅಹಂಕಾರ ಕ್ಷಾರ.

ವಿ. ಹೇಮಂತಕುಮಾರ್, ಬೆಂಗಳೂರು

ಹೊಲಗಳಲ್ಲಿ ಬೆದರುಬೊಂಬೆಗಳಾಗಿ ಗಂಡುಬೊಂಬೆಗಳನ್ನೇ ನಿಲ್ಲಿಸಿರುತ್ತಾರೆ. ಏಕೆ?

ಕತ್ತಲಲ್ಲಿ ಹೆಣ್ಣಿನ ಆಕಾರ ಕಂಡರೂ ಗಂಡುಗೂಳಿಗಳು ನುಗ್ಗಿ ಹೊಲ ಹಾಳಾದೀತೆಂದು.

ಬೂಕನಕೆರೆ ವಿಜೇಂದ್ರ, ಮೈಸೂರು

ದೇವರುಗಳಿಗೆ ನೆಗಡಿ ಕೆಮ್ಮು ಬಂದರೆ ಯಾರ ಬಳಿ ಹೋಗುತ್ತಾರೆ?

ನಳ/ಭೀಮನ ಬಳಿ ಒಳ್ಳೆಯ ಕಷಾಯ ಮಾಡಿಸಿಕೊಂಡು ಕುಡಿಯುತ್ತಾರೆ.

## ಬಹುಮಾನಿತ ಪ್ರಶ್ನೆ

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಮನುಕುಲಕ್ಕೆ ಯಾವುದು ಅತ್ಯಂತ ಶ್ರೇಷ್ಠ ಆಶೀರ್ವಾದ?

'ಹಾಳ್ಮಾಡ್ದೆ ಕಾಪಾಡ್ಕೊ' ಎಂದು ಕೊಟ್ಟಿರುವ ಸುಂದರ ನಿಸರ್ಗ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಮಾನವನು ಪರಿಪೂರ್ಣನಾಗಬೇಕಾದರೆ ಏನು ಮಾಡಬೇಕು?

ಮೊದಲು ಪರಿ ನಿರ್ಧರಿಸಬೇಕು, ನಂತರ ಅದರ ಹೂರಣ ಗ್ರಹಿಸಬೇಕು.

ಎಂ.ಸಿ. ಧನ್ಯತಾ, ಬೆಂಗಳೂರು

ಕಟುಕತನದ ಪರಮಾವಧಿ ಯಾವುದು?

ಸತ್ತವರೊಡನೆ ಸೆಲ್ಫೀ!

ಮಲ್ಲಿಕಾರ್ಜುನ, ಸುರಧೇನುಪುರ

ಪತಿಯನ್ನು ಹಿಂದೆ ಕೂರಿಸಿಕೊಂಡು ಸ್ಕೂಟರ್ ಚಲಾಯಿಸುವ ಪತ್ನಿಯ ಉದ್ದೇಶವೇನು?



ಲಗೇಜು, ಮಗು ಬೀಳದಂತೆ ಹಿಡಿದು ಕುಕ್ಕರಿಸಲಿ ಎಂದು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ರಾಜನಿಗೂ, ರಾಜಕಾರಣಿಗೂ ಏನು ವ್ಯತ್ಯಾಸ?

ರಾಜನಿಂದ ರಾಜ್ಯಭಾರ; ರಾಜಕಾರಣಿ ರಾಜ್ಯಕ್ಕೆ ಭಾರ.

ಗಂಗಾದೇವಿ, ಬೆಂಗಳೂರು

ರಾಜ ಕಾಲುವೆ ಇರುವ ಹಾಗೆ ರಾಣಿ ಕಾಲುವೆ ಏಕಿಲ್ಲ?

ರಾಣಿಯರು ಅಷ್ಟು ಕೊಳಕಾಗಿರುವುದಿಲ್ಲ.

■ **ರಾಮ್**